Regd No B G 155 ೨ 16-I-1970

SATYAVADI Daily, MYSORE 4 ✱ 53 rd Year of Publication

ಗ್ರಾಂಸ್ : ಕಂಫರ್ಟ್ ಹೋಟೆಲ್ ಫೋನ್ : 22211

ನುಜಾತಾ

ತಿಲಕ್ ನಗರ, ಮೈಸೂರು

ವಿಶಿಷ್ಟ ಪೂರ್ಣ ಸೇವೆಯಲ್ಲಿ 4 ನೇ ವರ್ಷ ಪ್ರವೇಶ

ಈ ಸಂದರ್ಭದಲ್ಲಿ ನಮ್ಮ ಸರ್ವ ಹಿತೈಷಿಗಳಿಗೂ, ಗ್ರಾಹಕರುಗಳಿಗೂ

ಹೃತ್ಪೂರ್ವಕ ನಂದೇಶಗಳು

ತಮ್ಮ ಸಹಕಾರವನ್ನು ಯಾಚಿಸುತ್ತಾ ಕೋರುವ

ಎಸ್. ಎಸ್. ಎಸ್. ರಾವ್, ಮಾಲೀಕರು.

ಸ್ಥಾಪಕರು: ಆರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಬಿಟನಿನಲಿ ಉಪಾಧ್ಯಾಯರ ಭಾರೀ ಮುಷ್ಕರ

ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು

ಮೈಸೂರು— ಇಂದು ನಡೆದ ಚುನಾವಣೆಯಲ್ಲಿ, ಶ್ರೀ ಬಿ ಕೆ ಪುಟ್ಟಯ್ಯನವರು ಪುರಸಭಾ ಅಧ್ಯಕ್ಷರಾಗಿಯೂ, ಶ್ರೀ ಗಣೇಶ್ ರಾವ್‌ರವರು ಉಪಾಧ್ಯಕ್ಷರಾಗಿಯೂ ವಿಜಯಗೊಳಿಸಿದರು.

★

14 ಲಕ್ಷ ರೈಲ್ವೇ ನೌಕರರು

ನವದೆಹಲಿ— ದೇಶದಲ್ಲಿನ 14 ಲಕ್ಷ ರೈಲ್ವೇ ಕೆಲಸಗಾರರ ಬಗ್ಗೆ ಪ್ರತ್ಯೇಕ ವೇಜ್ ಬೋರ್ಡು ನಿರ್ಮಿಸಲು ರೈಲ್ವೇ ನೌಕರರ ಸಂಘ ಇಚ್ಚಿಸಿದೆ.

●

ಗೌರ್ನರರ ನುಡಿ

ಬೆಂಗಳೂರು— ಗೌರ್ನರ್ ಶ್ರೀ ಧರ್ಮವೀರರವರು ಇನ್‌ಸ್ಟಿಟ್ಯೂಟ್ ಆಫ್ ಎಂಜಿನೀರಿಂಗ್‌ನ 35 ನೇ ಅಧಿವೇಶನದಲ್ಲಿ ಮಾಡಿದ ಭಾಷಣದಲ್ಲಿ, ದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ತುರ್ತಿನ ಮೂಲವಾಗಿ ಪರಿಹರಿಸಲು ಕರೆಕೊಟ್ಟರು.

○

ತುಂಬಾ ಹಣ ತರುತ್ತೆ

ಬೆಂಗಳೂರು— ಮಂಗಳೂರು ಹತ್ತಿರ ವಿರುವ ಕುದುರೆಮುಖ ಕಬ್ಬಿಣದ ಅದಿರು ಗಣಿಗಳಿಂದ ದೇಶಕ್ಕೆ ತುಂಬಾ ಹಣ ಬರಬಹುದೆಂದು ಅನೇರಿಕಾದ ಮರಿಕೋನಾ ಕಾರ್ಪೊರೇಷನ್ನಿನ ಅಧ್ಯಕ್ಷ ರಾಬರ್ಟಸನ್ನರು ಹೇಳಿದರು.

★

ಗ ಗಾಸ್ನಾನ

ಅಲಹಾಬಾದು— ಉತ್ತರಾಯಣ ಪುಣ್ಯ ಕಾಲವ ಸಂದರ್ಭದಲ್ಲಿ ಬುಧವಾರ ಸುಮಾರು ಮೂರು ಲಕ್ಷ ಜನರು ಗಂಗಾ ಸ್ನಾನ ಮಾಡಿದರು.

ವಿದೇಶೀ ವಿನಿಮಯ ಖೋತಾ

ನವದೆಹಲಿ— ಎಣ್ಣೆ ಕಂಪೆನಿಗಳು ಶುದ್ಧಗೊಳಿಸದ ಎಣ್ಣೆ ಆಮದಿಗೆ ಕೊಟ್ಟ ದ್ದ ವಿದೇಶೀ ವಿನಿಮಯದಲ್ಲಿ ಶೇಕಡಾ 50 ಖೋತಾಮಾಡಲಾಗಿದೆ.

○

ಬೆಂಗಳೂರಿನಲ್ಲಿ ಹೋಟಲುಗಳು

ವೋಲ್ಗಾ ಹೋಟಲನ್ನು ಉದ್ಘಾಟಿಸುತ್ತಾ, ಪ್ರವಾಸ ಮಂತ್ರಿ ಶ್ರೀ ಮಹಮದ್ದಾಲಿಯವರು, ಮಾರ್ಚಿಯಲ್ಲಿ ಅಂತರರಾಷ್ಟ್ರೀಯ ಪ್ರವಾಸ ಸಮ್ಮೇಳನ ನಡೆಸಲಾಗುವುದೆಂದು ಹೇಳಿದರು ; 300 ಪ್ರತಿನಿಧಿಗಳು ಬರಬಹುದೆಂದರು – ಬೆಂಗಳೂರಿನಲ್ಲಿ 1900 ಸಸ್ಯಾಹಾರ ಹೋಟಟುಗಳೂ 270 ಸಸ್ಯಾಹಾರೇತರ ಹೋಟಲುಗಳೂ ಇರುವೆಂದೂ, ಹೋಟಲುಗಳಲ್ಲಿ 4300 ಹೋಟಲುಗಳಲ್ಲಿ 4300 ಹಾಸಿಗೆಗಳ ಸೌಲಭ್ಯವಿರುವುದೆಂದೂ ತಿಳಿಸಿದರು – ದಿನಕ್ಕೆ 1 ಲಕ್ಷ ಜನ ಬಂದುಹೋಗುತ್ತಿದ್ದು ಹೋಟಲು ಕೈಗಾರಿಕೆ ವಿಸ್ತರಣೆಗೆ ಬೇಕಾದಷ್ಟು ಅವಕಾಶವಿರುವುದೆಂದೂ ತಿಳಿಸಿದರು.

○

ರೂ 382446

ಮದರಾಸು— ನಿನ್ನೇ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲ್‌ನಲ್ಲಿ ಒಂದೇ ಒಂದು ಟಿಕೀಟಿಗೆ ರೂ 382446 ದೊರೆಯಿತು.

○

ಗಂಡನನ್ನು ಕೊಂದಳು

ಬೆಂಗಳೂರು— ತನ್ನ ಗಂಡ, ಅತ್ತೆ, ಮಾವ, ಸಂಸಾರದಲ್ಲಿನ ಸೇವಕ ಮತ್ತು ಆತನ ಮಗಳಿಗೆ ವಿಷಮಿಶ್ರ ಆಹಾರ ಕೊಟ್ಟು ಕೊಂದ ಅಪರಾಧಕ್ಕಾಗಿ ಕೋಲಾರ ಜಿಲ್ಲಾ ಸಿಕಾಲ್ ಗ್ರಾಮದಲ್ಲಿಯ ಒಬ್ಬಳನ್ನು ಬಂಧಿಸಲಾಗಿದೆ.

ಬರ್ಲಿನ್ನಿನಲ್ಲಿ ಶವಗಳ ರಾಶಿ

ಪಶ್ಚಿಮ ಬರ್ಲಿನ್– ಬರ್ಲಿನ್ನಿನಲ್ಲಿ ಶವ ಸಂಸ್ಕಾರ ಅಥವಾ ಹೂಳುವ ಕಾರ್ಯಕ್ಕೆ ಉತ್ಕಟ ಸ್ಥಿತಿ ಒದಗಿದೆ ಎನ್ನುವುದು, ಒಂದು ಗಾಜಿನ ಹಸರು ಮನೆಯಲ್ಲಿ ಹೆಣ ತುಂಬಿದ ಶವ ಪೆಟ್ಟಿಗೆಗಳು ರಾಶಿರಾಶಿಯಾಗಿ ಬಿದ್ದಿರುವುದರಿಂದ ವ್ಯಕ್ತವಾಗುತ್ತದೆ.

★

ಭಾರಿ ವಿಮಾನು

ಮಂಗಳೂರು— 17ನರೆ ಅಡಿಯ ಹೆಣ್ಣು ಗರಗಸದ ವಿಮಾನು ಹಿಡಿಯಲ್ಪಟ್ಟಿತು – ತೂಕ 2 ಟನ್‌ಗಳಿವೆ – ಇದನ್ನು ಹರಾಜಿನಲ್ಲಿ ರೂ 277 ಕ್ಕೆ ಮಾರಲಾಯಿತೆಂದು ಗೊತ್ತಾಗಿದೆ.

○

ಕುಷ್ಟರೋಗಿಗಳು

ಬರ್ಹಾಂಪುರ (ಗಂಜಾಂ)— ಭಾರತದಲ್ಲಿ 30 ಲಕ್ಷ ಜನ ಕುಷ್ಟರೋಗ ಪೀಡಿತರಾಗಿದ್ದು ಮತ್ತೆ 30 ಲಕ್ಷ ಜನ ಅಪಾಯ ಸ್ಥಿತಿ ವಲಯದಲ್ಲಿರುವರೆಂದೂ ಭಾರತದ ಸ್ಟೇಟ್ ಆರೋಗ್ಯ ಮಂತ್ರಿಯವರು ಹೇಳಿರುವರು.

○

ತಮ್ಮ ಬಾಕಿ ಮತ್ತಿತರ ಸೌಕರ್ಯಕ್ಕಾಗಿ

ಬಳ್ಳಾರಿ— ಕಂಪ್ಲಿಯ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜನ್ನು ಕಬ್ಬು ಬೆಳೆಯುವವರು ನಿಲ್ಲಿಸಿರುವರು.

★

ಕಬ್ಬಿಣದ ಪಾತ್ರೆ

ಖರಗಪುರ— ದೇಹಕ್ಕೆ ಕಬ್ಬಿಣದ ಅಭಾವ ತಪ್ಪಲು ಕಬ್ಬಿಣ ಪಾತ್ರೆಗಳಲ್ಲಿ ಅಡಿಗೆ ಮಾಡಲು ಪ್ರೊ॥ ಚಟರ್ಜಿಯವರು ಸೈನ್ಸ್ ಕಾಂಗ್ರೆಸ್‌ನಲ್ಲಿ ತಿಳಿಸಿದರು.

●

ಉಪಾಧ್ಯಾಯರ ಮುಷ್ಕರ

ಬ್ರಿಟಿಷ್ ಸ್ಕೂಲು ಉಪಾಧ್ಯಾಯರಗಳು ಸೋಮವಾರ ಭಾರಿ ಮುಷ್ಕರ ನಡೆಸಿದರು – ಇಂಗ್ಲೆಂಡ್ ಮತ್ತು ವೇಲ್ಸಿನ 5000 ಉಪಾಧ್ಯಾಯರ ಮುಷ್ಕರದಿಂದ 345 ಸ್ಕೂಲುಗಳ 150000 ವಿದ್ಯಾರ್ಥಿಗಳಿಗೆ ರಜ ಸಿಕ್ಕಿತು – 32000 ಉಪಾಧ್ಯಾಯರುಗಳಿಗೆ ತಲಾ ವರ್ಷಕ್ಕೆ 135 ಪೌಂಡು ಹೆಚ್ಚು ಸಂಬಳ ಕೇಳಿಕೆ ಹಾಕಲಾಗಿದೆ.

★

ಸಭೆ ನಡೆಸಲಾಗಲಿಲ್ಲ

ಮಂಡ್ಯ— ಸ್ಥಳೀಯ ಪೌರಸಭಾ ಚುನಾವಣೆ ಸಂಬಂಧದಲ್ಲಿ ಹೊಸ ಕಾಂಗ್ರೆಸ್ಸು ನಾಯಕರು ನಿನ್ನೆ ಮಾಡಲಿದ್ದ ಭಾಷಣಗಳು, ಹೀಯಾಳಿಸುವ ಕೂಗಾಟದಿಂದ, ತ್ಯಜಿಸಲ್ಪಡಬೇಕಾಯಿತು – ಚಪ್ಪರ ಕೆಡವಿ, ವಿದ್ಯುದ್ದೀಪದ ಸಂಬಂಧ ತಪ್ಪಿಸಲಾಯಿತು.

★

ಹರತಾಳ

ಹೈದರಾಬಾದು— ತೆಲಂಗಾಣಾ ಚಳವಳಿಯ ವಾರ್ಷಿಕೋತ್ಸವ ಸಂಬಂಧವಾಗಿ ನಿನ್ನೆ ಜೋಡಿ ಪಟ್ಟಣಗಳಲ್ಲಿ, ತೆಲಂಗಾಣಾ 9 ಜಿಲ್ಲೆಗಳಲ್ಲಿ ಹರತಾಳ ಯಶಸ್ವಿಯಾಗಿ ನಡೆಯಿತು.

★

ಬಹಿಷ್ಕಾರ

ಜಯಪುರ— ಒಬ್ಬ ಸ್ವತಂತ್ರ ಸದಸ್ಯರನ್ನು ಬಿಟ್ಟು ಮಿಕ್ಕೆಲ್ಲ ವಿರೋಧ ಸದಸ್ಯರೂ ನಿನ್ನೆ ರಾಜಸ್ಥಾನ ಶಾಸನ ಸಭೆಯಲ್ಲಿ ಗೌರ್ನರರ ಭಾಷಣವನ್ನು ಬಹಿಷ್ಕರಿಸಿದರು – ಕೆಲವು ಕಡೆದ ಪೋಲೀಸರ ಗೋಳೀಬಾರನ್ನು ಪ್ರತಿಭಟಿಸಿ ಹೀಗೆ ಮಾಡಲಾಯಿತು.

★

ಶ್ರೀ ರಾಮಚಂದ್ರ ಸ್ವಾಮಿಯಲ್ಲಿ ನಾಯಿಯ ಮನವಿ

(ಮುಂದುವರಿದುದು)

— — —

ಆಗ ನಾಯಿ ಹೇಳಿತು– " ಆ ಬ್ರಾಹ್ಮಣನನ್ನು ಕಾಳಿಂಜರ್ ಆಶ್ರಮಕ್ಕೆ ಸಹಾಂತನನ್ನಾಗಿ ಮಾಡಿ " ಎಂದು.

ಎಲ್ಲರಿಗೂ ಆಶ್ಚರ್ಯವಾಯಿತು ; ಅದು ಬಹಳ ಸಂಪತ್ತಿನ ಆಶ್ರಮವಾಗಿದ್ದುದರಿಂದ, ಆ ಮನುಷ್ಯನಿಗೆ ಪಾರಿತೋಷಕ ಕೊಡಲು ನಾಯಿ ಇಚ್ಛಿಸಿದೆ ಎಂದೆಂದು ಕೊಂಡರು.

' ಇದಿಷ್ಟೇಯೋ ' ಎಂದು ಶ್ರೀ ರಾಮಚಂದ್ರನು ಕೇಳಿದನು.

ಹೌದು ಮಹಾಸ್ವಾಮಿ. ಎಂದಿತು ನಾಯಿ.

ರಾಮಚಂದ್ರನು ಹಾಗೇ ಆಜ್ಞೆ ಮಾಡಿದನು ; ಬ್ರಾಹ್ಮಣನು ಅತ್ಯಾನಂದದಿಂದ ಹೊರಟುಹೋದನು.

ಬ್ರಾಹ್ಮಣನು ಹೊರಟುಹೋದಮೇಲೆ ಶ್ರೀ ರಾಮಚಂದ್ರನು " ಆ ಬ್ರಾಹ್ಮಣನಿಗೆ ಅಂತಹ ಶಿಕ್ಷೆಯನ್ನು ಏಕೆ ಸಲಹೆಮಾಡಿದೆ ' ಎಂದು ನಾಯಿಯನ್ನು ಕೇಳಿದನು.

ನಾಯಿ ಹೇಳಿತು— " ಮಹಾಸ್ವಾಮಿ, ನಾನೇ ಹಿಂದಿನ ಜನ್ಮದಲ್ಲಿ ಆ ಆಶ್ರಮಕ್ಕೆ ಮುಖ್ಯಾಧಿಕಾರಿಯಾಗಿದ್ದೆನು ; ಅದು ಬಹಳ ಧನಿಕ ಮತ್ತು ಬಲಶಾಲಿಯಾದ ಆಶ್ರಮ ; ನಾನು ಮುಖ್ಯಾಧಿಕಾರಿಯಾಗಿದ್ದಾಗ ಪ್ರತಿಯೊಬ್ಬರನ್ನೂ ನಿರ್ದಯೆಯಿಂದ ಕ್ರೂರವಾಗಿ ಕಾಣುತ್ತಿದ್ದೆ ; ಆದ್ದರಿಂದಲೇ ಇಂದು ನಾಯಾಗಿದ್ದೇನೆ. ಈಗ ಹೋದ ಬ್ರಾಹ್ಮಣನು ಬಹಳ ಕ್ರೂರಿ ; ನನ್ನದೇನೂ ತಪ್ಪಿಲ್ಲದಿದ್ದರೂ ನಿರ್ದಯವಾಗಿ ಕಂಡನು ; ಇಂತಹ ಮನುಷ್ಯ ಆ ಆಶ್ರಮದ ಮುಖ್ಯಾಡಳಿತಗಾರನಾದರೆ, ಆ ಆಶ್ರಮದಲ್ಲಿನ ಜೀವಿಗಳನ್ನು ನರಕಯಾತನೆಗೆ ಐಚ್ಛಪಡಿಸುವುದರಲ್ಲಿ ಸಂಶಯವಿಲ್ಲ : ಮತ್ತು ಆತನ ಪತನವು ನನಗಿಂತಲೂ ಕೀಳಾಗುವುದರಲ್ಲಿ ಸಂದೇಹವಿಲ್ಲ ಎಂದು ನಾಯಿಯು ನುಡಿಯಿತು.

ನಾಯಿಯ ವೃತ್ತಾಂತ ಕೇಳಿ ಎಲ್ಲರ ಮನಸ್ಸು ಮರುಗಿತು.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್: ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI

SUDHA

A Superb Tonic

ದೇಶದ ಹಿತಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ ಅಮೋಘ 3 ನೇ ವಾರ

ಅಮೋಘ ಸ್ವಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವತ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 4ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಘರಿಷ್ಟ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲೀ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysore